**ಸಾಕ್ಷಿಯನ್ನು ದಿಃ 06.12.2016 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲು ಃ ವಾದಿಗಳ ಪರ ಶ್ರೀ ಎನ್ ಎಸ್ ವಕೀಲರಿಂದಃ**

ದಾವಾಸ್ತಿಯು ಅಬ್ದುಲ್ ಖಾದರ್ ರವರಿಗೆ ದರ್ಕಾಸ್ತುವಿನಲ್ಲಿ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಅಬ್ದುಲ್ ಖಾದರ್ ರವರು ವಟ್ರಕುಂಟೆ ಗ್ರಾಮದಲ್ಲಿದ್ದರು. ಸದರಿಯವರು ಮರಣ ಹೊಂದಿ 30 ವರ್ಷಗಳಾಗಿರುತ್ತದೆ. ನಾನು ಬೈರನಾಯಕನಹಳ್ಳಿಯ ವಾಸಿಯಾಗಿದ್ದು, ನಮ್ಮ ಗ್ರಾಮವು ವಟ್ರಕುಂಟೆಯಿಂದ 1 ಕಿ. ಮೀ. ಅಂತರದಲ್ಲಿರುತ್ತದೆ. ಅಬ್ದುಲ್ ಖಾದರ್ ರವರ ಮಗ ಅಬ್ದುಲ್ ಸುಭಾನ್ ವಟ್ರಕುಂಟೆಯಲ್ಲಿ ವಾಸವಾಗಿದ್ದ. ದಾವಾಸ್ತಿಯು ಅಬ್ದುಲ್ ಖಾದರ್ ರವರಿಗೆ 1974-75 ರಂದು ಮಂಜೂರಾಗಿರುತ್ತದೆ. ಮಂಜೂರಾತಿ ಪತ್ರ ನನ್ನ ಹತ್ತಿರ ಇರುತ್ತದೆ. ಸದರಿ ಮಂಜೂರಾತಿ ಪತ್ರದ ಪ್ರತಿಯನ್ನು ವಾದಿಗಳು ಹಾಜರುಪಡಿಸಿದ್ದು ಅದನ್ನು ನಾನು ನೋಡಿರುತ್ತೇನೆ. ನಿ ಪಿ 2 ಮಂಜೂರಾತಿ ಪತ್ರದ ಪ್ರತಿ ಇದ್ದು, ಅದರ ಅಸಲು ಪತ್ರ ನನ್ನ ಹತ್ತಿರ ಇರುತ್ತದೆ. ನಿ ಪಿ 2 ರಲ್ಲಿನ ಮಂಜೂರಾತಿ ದಿನಾಂಕ ತಪ್ಪಾಗಿರುತ್ತದೆ.

ಆಸ್ತಿಯ ಮಂಜೂರಾತಿಯ ನಂತರ 15 ವರ್ಷಗಳ ಕಾಲ ಪರಭಾರೆ ಮಾಡಬಾರದೆಂದು ನಿರ್ಬಂದಿಸಲಾಗಿತ್ತು ಎಂದರೆ ಸರಿ. 1974 ರಲ್ಲಿ ಅಬ್ದುಲ್ ಖಾದರ್ ರವರಿಗೆ ಆಸ್ತಿ ಮಂಜೂರಾಗಿತ್ತು ಎಂದು ತೋರಿಸಲು ನನ್ನ ಹತ್ತಿರ ದಾಖಲೆ ಇರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡಲು ಯಾವುದೇ ತೊಂದರೆ ಇರುವುದಿಲ್ಲ. ಆಸ್ತಿ ಮಂಜೂರಾದ ನಂತರ ಅಬ್ದುಲ್ ಖಾದರ್ ರವರ ಹೆಸರಿನಲ್ಲಿ ಆಸ್ತಿಯ ಪಹಣಿ, ಖಾತೆ ಬಂದಿರುತ್ತದೆ ಎಂದರೆ ಸರಿ. ನಾನು 1996 ರಲ್ಲಿ ಅಬ್ದುಲ್ ಸುಭಾನ್ ರವರಿಂದ ಆಸ್ತಿಯನ್ನು ಖರೀದಿಸಿರುತ್ತೇನೆ. ನಾನು ಆಸ್ತಿ ಖರಿಸಿದ ಖರೀದಿ ಪತ್ರ ಲೋನ್ ಮಾಡಿದ್ದರಿಂದ ಬ್ಯಾಂಕಿನಲ್ಲಿ ಇಟ್ಟಿರುತ್ತೇನೆ. ನಾನು 2005 ರಿಂದ 7 ರವರ ನಡುವೆ ಹುದುಕುಳ ಪ್ರಗತಿ ಗ್ರಾಮೀಣ ಬ್ಯಾಂಕ್‌ನಲ್ಲಿ ಟ್ರಾಕ್ಟರ್ ಸಾಲ ಪಡೆದುಕೊಂಡಿರುತ್ತೇನೆ. ಸದರಿ ಸಾಲವು ಇನ್ನು ಮುಕ್ತಾಯಗೊಂಡಿರುವುದಿಲ್ಲ. ಲೋನ್ ಪಡೆದ ಸಲುವಾಗಿ ಅಸಲು ದಾಖಲೆಗಳನ್ನು ಬ್ಯಾಂಕಿಗೆ ಕೊಟ್ಟ ಬಗ್ಗೆ ನನ್ನ ಹತ್ತಿರ ದಾಖಲೆಗಳಿರುತ್ತವೆ. ನನ್ನ ಕ್ರಯ ಪತ್ರದ ದೃಡೀಕೃತ ನಕಲನ್ನು ಪಡೆದುಕೊಂಡಿರುವುದಿಲ್ಲ. ಜೆರಾಕ್ಸ್ ಪ್ರತಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ.  ಆಸ್ತಿಯನ್ನು ಖರೀದಿಸಿದ ನಂತರ ನನ್ನ ಹೆಸರಿಗೆ 1996 ರಲ್ಲಿ ಖಾತೆಯಾಗಿರುತ್ತದೆ. ಸದರಿ ಮುಟೇಶನ್ ಪ್ರತಿ ನನ್ನ ಹತ್ತಿರ ಇರುತ್ತದೆ.

ಆಸ್ತಿ ಖರೀದಿಸುವಾಗ ಹೆಚ್. ಕೃಷ್ಣಪ್ಪ, ಲಕ್ಕಯ್ಯ, ನನ್ನಾಸಾಬ್, ನಾಗರಾಜ್, ರಾಜಪ್ಪ, ಅಜ್ಮೀರ್, ಅಬ್ದುಲ್, ಸೀನಪ್ಪ ಹಾಗೂ ಇತರರು ಇದ್ದು ಪಂಚಾಯತಿ ಆಗಿರುತ್ತದೆ. ಅಬ್ದುಲ್ ಖಾದರ್ ರವರ 3 ಜನ ಮಕ್ಕಳಿದ್ದು, ಅಬ್ದುಲ್ ಸುಭಾನ್ ರವರ ಹೆಸರಿನಲ್ಲಿ ಆಸ್ತಿಯ ಖಾತೆಯಾಗಿತ್ತು. ಅಬ್ದುಲ್ ಖಾದರ್ 3 ಜನ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಸದರಿಯವರು ವಟ್ರಕುಂಟೆ ಗ್ರಾಮದಲ್ಲಿದ್ದರು. ಸದರಿ 3 ಜನ ಗಂಡು ಮಕ್ಕಳಾಗಿದ್ದರು ಎಂದರೆ ಸರಿ. ಒಬ್ಬ ಸರ್ಧಾರ್, ಒಬ್ಬ ಸುಭಾನ್ ಮತ್ತು ಇನ್ನೊಬ್ಬ ಷಬೀರ್ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಬ್ದುಲ್ ಖಾದರ್ ರವರ ಹೆಂಡತಿ ಹೆಸರು ಮಾಜಿಬೀ ಎಂದು ಇರುತ್ತದೆ ಎಂದರೆ ಸರಿ. ಅಬ್ದುಲ್ ಖಾದರ್ ರವರಿಗೆ ಸೈದಾನ್, ಸಬೀರಾ ಎಂದು ಹೆಣ್ಣು ಮಕ್ಕಳಿದ್ದರು ಎಂದರೆ ಸರಿಯಲ್ಲ. ಅಬ್ದುಲ್ ಖಾದರ್ ರವರಿಗೆ 4 ಜನ ಗಂಡು ಮಕ್ಕಳಿದ್ದರು ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ಅಬ್ದುಲ್ ಖಾದರ್ ರವರ ಹೆಂಡತಿ ಮತ್ತು ಮಕ್ಕಳು ನನ್ನ ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರುಗಳು ಒಪ್ಪಿಕೊಂಡು ಪೊವತಿವಾರಸು ಖಾತೆ ಮಾಡಿಕೊಂಡಿದ್ದು, ಸದರಿಯವರು ನನ್ನ ಪತ್ರಕ್ಕೆ ಸಹಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಪೌತಿವಾರಸು ಆಧಾರದಲ್ಲಿ ಖಾತೆಯು ಸುಭಾನ್‌ರವರ ಹೆಸರಿಗೆ 1989 ರಲ್ಲಿ ಆಗಿರುತ್ತದೆ. ಸದರಿ ಮುಟೇಶನ್ ಪ್ರತಿ ಮತ್ತು ಉಳಿದವರು ನೀಡಿದ ಹೇಳಿಕೆಯ ಜೆರಾಕ್ಸ್ ಪ್ರತಿ ನನ್ನ ಹತ್ತಿರ ಇರುತ್ತದೆ. ಸುಭಾನ್ ಮರಣಹೊಂದುವಾಗ ಹೈದಾರಾಬಾದ್‌ನಲ್ಲಿ ವಾಸವಾಗಿದ್ದ. ಅಬ್ದುಲ್ ಖಾದರ್‌ರವರ ಮಕ್ಕಳೂ ಸಹ ಹೈದಾರಾಬಾದ್‌ನಲ್ಲಿರುತ್ತಾರೆ ಎಂದರೆ ಸರಿ.

**ಒಎಸ್. 36/2011**

**ಡಿಡಬ್ಲ್ಯು. 1**

ದಾವೆಯಲ್ಲಿ ವಾದಿಗಳು ಏನೇನು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದು, ನಾನು ತಿಳಿದುಕೊಂಡಿರುವುದಿಲ್ಲ. ಅಬ್ದುಲ್ ಖಾದರ್‌ರವರ ಮರಣ ನಂತರ ಆಸ್ತಿಯಲ್ಲಿ ವಾದಿಗಳಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಅಬ್ದುಲ್ ಖಾದರ್ ರವರ ಮರಣ ನಂತರ ಆತನ ಹೆಂಡತಿ ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕು ಬಂದ ಬಗ್ಗೆ ನನಗೆ ಗೊತ್ತಿಲ್ಲ. ಆಸ್ತಿ ಖರಿದಿಸುವಾಗ ಅಬ್ದುಲ್ ಖಾದರ್ ರವರಿಗೆ ಅಬ್ದುಲ್ ಸುಬಾನ್ ಹೊರತುಪಡಿಸಿ, ಇನ್ನುಳಿದ ಮಕ್ಕಳು ಇರುವ ಬಗ್ಗೆ ನನಗೆ ಗೊತ್ತಿರಲಿಲ್ಲ. ಅಬ್ದುಲ್ ಖಾದರ್ ರವರ ಮಕ್ಕಳು ಒಟ್ಟು ಕುಟುಂಬದಲ್ಲಿದ್ದು, ಪಂಚಾಯತಿ ಮಾಡಿ, ಅಬ್ದುಲ್ ಸುಬಾನ್ ರವರು ನನಗೆ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿಕೊಂಡಿರುತ್ತಾರೆ. ನಾನು ಹೇಳಿದಂತೆ ಯಾವುದೇ ಪಂಚಾಯತಿಯಾಗಿರುವುದಿಲ್ಲ ನಾನು ಮತ್ತು 1ನೇ ಪ್ರತಿವಾದಿ ಸೇರಿ ವಾದಿಗಳಿಗೆ ಮೋಸಮಾಡುವ ಉದ್ದೇಶದಿಂದ ದಾಖಲೆ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪಂಚಾಯತಿ ಮಾಡಿ, ಮುಚ್ಚಳಿಕೆ ಬರೆದಿದ್ದು, ಅದು ನನ್ನ ಹತ್ತಿರ ಇರುತ್ತದೆ. ದಾವಾಸ್ತಿಯಲ್ಲಿ ನನಗೆ ಯೂವುದೇ ಹಕ್ಕು, ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಮೃತ 1ನೇ ಪ್ರತಿವಾದಿ ಸೇರಿ ಆಸ್ತಿ ಪರಭಾರೆ ನಿಷೇಧ ಅವಧಿ ಚಾಲ್ತಿಯಲ್ಲಿದ್ದರು ಷರತ್ತನ್ನು ಉಲ್ಲಂಘಿಸಿ, ಎರಡೇ ವರ್ಷದಲ್ಲಿ ದಾಖಲೆ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಖರೀದಿ ಪತ್ರವಾಗಿರುವ ವಿಚಾರ ವಾದಿಗಳಿಗೆ 2011 ರಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ನಿಷೇಧಿತ ಅವಧಿ ಎರಡೇ ವರ್ಷಗಳಲ್ಲಿ ಮಾಡಿಕೊಂಡಿರುವುದು ಗೊತ್ತಾಗುತ್ತದೆ ಎಂದು 1996 ರಲ್ಲಿ ಮಾಡಲಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ಬ್ಯಾಂಕಿನಿಂದ ಸಾಲ ಪಡೆಯದಿದ್ದರೂ ಸಹ ಅಸಲು ದಾಖಲೆಗಳನ್ನು ಹಾಜರುಪಡಿಸಿದಲ್ಲಿ ನಿಜಾಂಶ ಹೊರಬರುತ್ತದೆಂದು ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾಸ್ತಿಯಲ್ಲಿ ಹಕ್ಕು ಇರುವುದರಿಂದ ನನಗಾಗಿರುವ ಖರೀದಿ ಪತ್ರವು ವಾದಿಗಳ ಹಕ್ಕಿಗೆ ಯಾವುದೇ ಬಾದ್ಯತೆ ಉಂಟುಮಾಡುವುದಿಲ್ಲ ಎಂದರೆ ಸರಿಯಲ್ಲ.

ವಾದಿಗಳಿಂದ ಜಿಪಿಎ ಪಡೆದ ಅಬ್ದುಲ್ಲಾ ಯಾರು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯಲ್ಲಿ ವಾದಿಗಳಿಗೆ ಹಕ್ಕು ಇರುವ ವಿಚಾರ ಗೊತ್ತಿದ್ದರೂ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

**(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳ ಚ್ಚು ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಮರಿಯಪ್ಪ)**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್‌ಸಿ,

ಬಂಗಾರಪೇಟೆ.